ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಹಾಗೂ ಎಫ್.ಟಿ.ಎಸ್.ಸಿ-1, ಹಾವೇರಿ
**ಎಸ್.ಸಿ.18/2020**

PW- 04

CW-09

| | |
|---|---|
| ಸಾಕ್ಷಿದಾರರ ಹೆಸರುಃ | ಪ್ರಕಾಶ ಮಾಳವದೆ |
| ತಂದೆಯ ಹೆಸರುಃ | ಗಂಗಾಧರ |
| ವಯಸ್ಸುಃ | 52 ವರ್ಷ |
| ಉದ್ಯೋಗಃ | ವ್ಯಾಪಾರ |
| ಹಾಲಿ ವಾಸ ಸ್ಥಳಃ | ಮಾರುಕಟ್ಟೆ ರಸ್ತೆ , ಶಿಗ್ಗಾಂವ |

ದಿನಾಂಕ**: 21.09.2024** ರಂದು ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ

ಮೃತ ಶಾಂತಾಬಾಯಿ ನನ್ನ ತಾಯಿ. ಚಾಸಾ-1 , 14 , 15 ನನ್ನ ಸೋದರ ಮಾವಂದಿರು. ಚಾಸಾ-16 ನನ್ನ ಅತ್ತೆ. ಚಾಸಾ-17, 18 ನನ್ನ ಅಳಿಯಂದಿರು. ಚಾಸಾ-8, 10 ಮತ್ತು 11 ನನ್ನ ಸಹೋದರರು. ಚಾಸಾ-12 ನನ್ನ ಸಹೋದರಿ. ಚಾಸಾ-13 ನನ್ನ ಮೃತ ತಾಯಿ ವಾಸವಿದ್ದ ಮನೆಯ ಎದುರುಮನೆಯ ವಾಸಿ. ನನ್ನ ತಂದೆ 14 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ನನ್ನ ಮತ್ತು ನನ್ನ ಸಹೋದರ, ಸಹೋದರಿಯರ ಮದುವೆ ಆಗಿರುತ್ತವೆ. ನಾವೆಲ್ಲರೂ ಪ್ರತ್ಯೇಕವಾಗಿ ನಮ್ಮ ನಮ್ಮ ಕುಟುಂಬದೊಂದಿಗೆ ವಾಸವಾಗಿರುತ್ತೇವೆ. ನನ್ನ ತಾಯಿ ಸಾಯುವ ಮುನ್ನ ಮಾರುಕಟ್ಟೆ ರಸ್ತೆಯ ನಮಗೆ ಸೇರಿದ ಹಿರಿಯರ ಮನೆಯಲ್ಲಿ ಒಬ್ಬಳೇ ವಾಸವಾಗಿರುತ್ತಿದ್ದಳು. ನಾವೆಲ್ಲರೂ ಹೋಗಿ ಬಂದು ಮಾಡಿ ಅವಳ ಯೋಗಕ್ಷೇಮ ನೋಡಿಕೊಳ್ಳುತ್ತಿದ್ದೆವು. ನನ್ನ ತಂಗಿ ಪ್ರತಿದಿನ ನನ್ನ ಮೃತ ತಾಯಿಗೆ ಕರೆ ಮಾಡಿ ಯೋಗಕ್ಷೇಮ ವಿಚಾರಿಸುತ್ತಿದ್ದಳು.

ತಾಃ 17.08.2019 ರಂದು ಮುಂಜಾನೆ 8.30 ಕ್ಕೆ ನನ್ನ ಅಣ್ಣ ಚಾಸಾ-8 ನನಗೆ ಫೋನ ಕರೆ ಮಾಡಿ ಗಾಭರಿಯಿಂದ ಮಾತನಾಡಿ ನನ್ನ ತಾಯಿ ವಾಸವಿದ್ದ ಮನೆಗೆ ಬರಲು ಹೇಳಿದ ಮೇರೆಗೆ ನಾನು ನನ್ನ ಮಾರುಕಟ್ಟೆಯ ರಸ್ತೆಯ ನಮ್ಮ ಹಿರಿಯರ ಮನೆಗೆ ಹೋದಾಗ ಅವಳು ದಿನಾಲು ಮಲಗುವ ಮಂಚದಲ್ಲಿ ಅಂಗಾತವಾಗಿ ಮಲಗಿದ್ದ ಸ್ಥಿತಿಯಲ್ಲಿದ್ದಳು. ಅವಳ ಎರಡು ಕೈಗಳನ್ನು ಸೀರೆಯಿಂದ ಮಂಚಕ್ಕೆ ಕಟ್ಟಲಾಗಿತ್ತು. ಅವಳ ಕುತ್ತಿಗೆಯನ್ನು ಸೀರೆಯಿಂದ ಬಿಗಿಯಲಾಗಿತ್ತು. ಸದರಿ ಸೀರೆಯಿಂದ ಅವಳ ಕಣ್ಣುಗಳನ್ನು ಕಟ್ಟಲಾಗಿತ್ತು. ನನ್ನ ತಾಯಿಯ ಬಟ್ಟೆಗಳು ಅಸ್ತವ್ಯಸ್ತವಾಗಿದ್ದವು. ನನ್ನ ತಾಯಿಯ ಎಡ ಕಪಾಳದ ಮೇಲೆ ಗಾಯವಾಗಿದ್ದು, ಬಾಯಿಯಿಂದ ರಕ್ತ ಸೋರಿಕೆಯಾಗಿತ್ತು. ಮಂಚದ ಪಕ್ಕ ನನ್ನ ರಕ್ತ ಹತ್ತಿದ್ದ ತಲೆದಿಂಬು ಬಿದ್ದಿತ್ತು. ನನ್ನ ತಾಯಿಯ ಬಳೆಗಳು ಒಡೆದು ಚೆಲ್ಲಾಪಿಲ್ಲಿಯಾಗಿದ್ದವು. ನನ್ನ ತಾಯಿಯ ಮೈಮೇಲೆ ಧರಿಸುತ್ತಿದ್ದ ಕೈಯಲ್ಲಿಯ 4 ಚಿಕ್ಕ ಬಂಗಾರದ ಬಳೆಗಳು, 2 ದೊಡ್ಡ ಬಂಗಾರದ ಬಳೆಗಳು, ಕತ್ತಲ್ಲಿದ್ದ ಚೈನ ಸರ ಒಡವೆಗಳು ಮೈ ಮೇಲೆ ಇರಲಿಲ್ಲ. ಸದರಿ ಮನೆಯಲ್ಲಿ ನನ್ನ ಅಣ್ಣ ಚಾಸಾ-8 ರವರು ಇದ್ದ

ಅವನು ಗಾಭರಿಯಾಗಿದ್ದ. ಸ್ವಲ್ಪ ಹೊತ್ತಿನ ನಂತರ ನನ್ನ ಉಳಿದ ಸಹೋದರರು ಮತ್ತು ಸಂಬಂಧಿಕರು ಬಂದರು. ನನ್ನ ತಾಯಿಯ ಸ್ಥಿತಿಯನ್ನು ನೋಡಿ ಯಾರೋ ದುಷ್ಕರ್ಮಿಗಳು ನನ್ನ ತಾಯಿಯ ಬಂಗಾರದ ಒಡವೆಗಳಿಗಾಗಿ ನನ್ನ ತಾಯಿಯನ್ನು ಕೊಲೆ ಮಾಡಿರುತ್ತಾರೆಂದು ನಮಗೆ ತಿಳಿದುಬಂದಿರುತ್ತದೆ. ನಾನು ಮತ್ತು ನನ್ನ ಅಣ್ಣ ಚಾಸಾ-8 ರವರು  ಮನೆಯ ಒಳಗಿನ ಕೋಣೆಗಳಿಗೆ ಹೋದಾಗ ಮನೆಯಲ್ಲಿ ಗ್ಯಾಸ ವಾಸನೆ ಹರಡಿಕೊಂಡಿತ್ತು. ಗ್ಯಾಸ ಸೀಲಿಂಡರ್ ನ ಪೈಪ್ ಬಿಚ್ಚಲಾಗಿತ್ತು. ಹೊಸ್ತಿಲಿನ ಮೇಲೆ ಹಚ್ಚಿದ ಹಿತ್ತಾಳೆಯ ದೀಪ ಆರಿತ್ತು. ಸದರಿ ದೀಪದ ಪಕ್ಕದಲ್ಲಿ ಬೆಂಕಿಪೊಟ್ಟಣ ಬಿದ್ದಿತ್ತು. ನಂತರ ಚಾಸಾ-1 ರವರು ಶಿಗ್ಗಾಂವ ಪೋಲಿಸರಿಗೆ ದೂರನ್ನು ನೀಡಿದರು. ನಂತರ ಪಂಚರನ್ನು ಕರೆದುಕೊಂಡು ಪೋಲಿಸರು ಮನೆಗೆ ಬಂದರು. ಪೋಲಿಸರು ನನ್ನ ತಾಯಿಯ ಶವ ಪಂಚನಾಮೆಯನ್ನು ಮಾಡಿದರು. ನಂತರ ನನ್ನ ತಾಯಿಯ ಶವವನ್ನು ಪೋಲಿಸರು ಶಿಗ್ಗಾಂವ ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ತೆಗೆದುಕೊಂಡು ಹೋಗಿ ವೈದ್ಯರು ಮರಣೋತ್ತರ ಪರೀಕ್ಷೆ ಮಾಡಿಸಿದರು. ನಂತರ ನಾವು ನಮ್ಮ ತಾಯಿಯ ಶವಸಂಸ್ಕಾರವನ್ನು ಮಾಡಿರುತ್ತೇವೆ. ನಾನು ಸಹ ಗಾಭರಿಯಲ್ಲಿದ್ದೆ. ಪೋಲಿಸರು ಅದೇ ದಿನ ನನ್ನನ್ನು ವಿಚಾರಿಸಿ ನನ್ನ ಹೇಳಿಕೆಯನ್ನು ಮಾಡಿಕೊಂಡಿರುತ್ತಾರೆ.

ನಾನು ಪೋಲಿಸರಿಗೆ ಹೇಳಿಕೆ ಕೊಟ್ಟ ನಂತರ ನನ್ನ ತಂಗಿ ಚಾಸಾ-12 ನನ್ನ ಮುಂದೆ, ನನ್ನ ತಾಯಿ ಸಾಯುವ ಮುನ್ನ ಆರೋಪಿ ಮತ್ತು ಅವನ ಹೆಂಡತಿ  ಒಂದು ವಾರದಿಂದ ನನ್ನ ತಾಯಿ ವಾಸವಿದ್ದ ಮನೆಗೆ ಬಂದು ಮನೆಯ ಅಟ್ಟವನ್ನು ಒಂದು ಆಫೀಸಿನ ಕೆಲಸಕ್ಕಾಗಿ ಬಾಡಿಗೆ ನಾತೆಯಿಂದ ಕೊಡುವಂತೆ ಕೇಳಿ, ನಂತರ ಒಬ್ಬ ಮಹಿಳೆಯನ್ನು ಸದರಿ ಆಫೀಸಿನವಳು ಎಂದು ಕರೆದುಕೊಂಡು ಬಂದು ಪರಿಚಯ ಮಾಡಿದ ನಂತರ ನನ್ನ ತಾಯಿ ಅವರಿಗೆ ಚಹಾದ ವ್ಯವಸ್ಥೆ ಮಾಡಿದ್ದಾಗಿ ನನ್ನ ತಾಯಿ ಅವಳ ಮುಂದೆ ಹೇಳಿದ್ದಾಗಿ ನನ್ನ ತಂಗಿ ನಮ್ಮ ಮುಂದೆ ಹೇಳಿದಳು. ನಂತರ ನಾನು  ಮತ್ತು ನಮ್ಮ ಸಹೋದರರು  ಸಂಶಯ ಬಂದು ಆರೋಪಿಯ ಮನೆಗೆ ಹೋಗಿ ನೋಡಿದಾಗ ಮನೆಯಲ್ಲಿ ಯಾರು ಇರದೇ ಅವನ ಮನೆಯ ಬಾಗಿಲು ಬಂದ್ ಆಗಿ ಮನೆಯ ಕೀಲಿ ಹಾಕಲಾಗಿತ್ತು. ಈ ಬಗ್ಗೆ ನಾನು ಪೋಲಿಸರ ಮುಂದೆ ಮರುಹೇಳಿಕೆಯನ್ನು ನೀಡಿರುತ್ತೇನೆ.

ನಂತರ ಪೋಲಿಸರು ನನಗೆ ತಾಃ06.09.2019 ರಂದು ಆರೋಪಿಯನ್ನು  ಪತ್ತೆ ಮಾಡಿ ಠಾಣೆಗೆ ಕರೆತಂದಿರುವುದಾಗಿ ಹೇಳಿದರು. ನಂತರ ನಾನು ಮತ್ತು ನಮ್ಮ ಸಹೋದರರು ಠಾಣೆಗೆ ಹೋಗಿರುತ್ತೇವೆ. ಸದರಿ ಠಾಣೆಯಲ್ಲಿ ಆರೋಪಿ ಇದ್ದನು. ಪೋಲಿಸರಿಂದ ನಮಗೆ ಆರೋಪಿ ಮತ್ತು ಅವನ ಹೆಂಡತಿ ನನ್ನ ತಾಯಿಯ ಬಂಗಾರದ ಒಡವೆಗಳಿಗಾಗಿ ತಾಃ 16.08.2019 ರಂದು ರಾತ್ರಿ 11.30 ಸುಮಾರಿಗೆ ನನ್ನ ತಾಯಿಯನ್ನು ಮಾತನಾಡಿಸುವ ನೆಪ ಮಾಡಿಕೊಂಡು ಅವಳು ವಾಸವಿದ್ದ ಮನೆಗೆ ಹೋಗಿ ನನ್ನ ತಾಯಿಯ ಎರಡು ಕೈಗಳನ್ನು ಮಂಚಕ್ಕೆ ಕಟ್ಟಿ , ಕುತ್ತಿಗೆಗೆ ಮತ್ತು ಕಣ್ಣಿಗೆ ಸೀರೆ ಕಟ್ಟಿ, ತಲೆದಿಂಬನ್ನು ನನ್ನ ತಾಯಿಯ ಮುಖಕ್ಕೆ ಒತ್ತಿಹಿಡಿದು ಸಾಯಿಸಿದ ಬಗ್ಗೆ ಗೊತ್ತಾಯಿತು. ಆರೋಪಿ ಮತ್ತು ಅವನ ಹೆಂಡತಿ ನನ್ನ ತಾಯಿ ಬಂಗಾರದ ಒಡವೆಗಳಾದ 6 ಬಳೆಗಳು ಮತ್ತು ಒಂದು ಬಂಗಾರ  ಲಾಕೇಟ ಸರ ತೆಗೆದುಕೊಂಡು ತಮ್ಮ ಮನೆಗೆ ಹೋಗಿ, ಮನೆಯಲ್ಲಿಟ್ಟು , ತಮ್ಮ ಮಕ್ಕಳನ್ನು ಅದಾಗಲೇ ಹುಬ್ಬಳ್ಳಿಗೆ ಕಳುಹಿಸಿ , ನಂತರ ತಾವು ಸಹ ಹುಬ್ಬಳ್ಳಿಯ ಉಣಕಲ್ ಕೆರೆಯ ಬಳಿ ಹೋಗಿ, ತಾವು ನನ್ನ ತಾಯಿಯನ್ನು ಕೊಲೆ ಮಾಡಿದ ವಿಷಯವನ್ನು ತನ್ನ ಮಕ್ಕಳಿಗೆ ಹೇಳಿ, ಪೋಲಿಸರು ತಮ್ಮನ್ನು ಉಳಿಸಲಾಗುವುದಿಲ್ಲ ಎಂದು ತಿಳಿದು ವಿಷ ಸೇವನೆ ಮಾಡಿ, ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನ ಪಟ್ಟು ವಿಷ ಸೇವಿಸಿದ್ದರು. ಆರೋಪಿ ಮತ್ತು ಅವನ ಹೆಂಡತಿ ವಿಷ ಸೇವಿಸಿದ್ದರಿಂದ ಸದರಿಯವರನ್ನು ಹುಬ್ಬಳ್ಳಿಯ ಕೀಮ್ಸ ಆಸ್ಪತ್ರೆಯಲ್ಲಿ ದಾಖಲು ಮಾಡಿದ್ದರು. ಚಿಕಿತ್ಸೆಯಲ್ಲಿದ್ದಾಗ ಆರೋಪಿಯ ಹೆಂಡತಿ ತೀರಿಕೊಂಡ ವಿಷಯ ಗೊತ್ತಾಯಿತು. ಈ ಬಗ್ಗೆ ನಾನು ಪೋಲಿಸರ

ಮುಂದೆ ಇನ್ನೊಂದು ಮರುಹೇಳಿಕೆಯನ್ನು ನೀಡಿರುತ್ತೇನೆ.

ನನ್ನ ತಾಯಿಯ ಬಂಗಾರದ ಒಡವೆಗಳನ್ನು ನಾವು ನ್ಯಾಯಾಲಯದಿಂದ ಆದೇಶ ಪಡೆದುಕೊಂಡು ವಶಕ್ಕೆ ಪಡೆದುಕೊಂಡಿರುತ್ತೇವೆ. ಸಾಕ್ಷಿಗೆ ನಿಪಿ-12 ರಿಂದ 16 ಪೊಟೊಗಳನ್ನು ತೋರಿಸಿದಾಗ ಸದರಿ ಪೊಟೊಗಳ ಪೈಕಿ ಒಂದು ಪೊಟೊದಲ್ಲಿ 4 ಬಂಗಾರದ ಬಳೆಗಳು ಇದ್ದು, ಇನ್ನೊಂದು ಪೊಟೊಗಳಲ್ಲಿ 2 ಬಂಗಾರದ ಬಳೆಗಳು ಇದ್ದು, ಇನ್ನೊಂದು ಪೊಟೊಗಳಲ್ಲಿ ಲಾಕೇಟ ಇರುವ ಬಂಗಾರದ ಸರವನ್ನು ನೋಡಿ ಸಾಕ್ಷಿಯು ಗುರುತಿಸುತ್ತಾರೆ. ಸದರಿ ಪೊಟೊಗಳಲ್ಲಿರುವ ವಸ್ತುಗಳನ್ನು ಈಗಾಗಲೆ ಮುಮಾ-1 ರಿಂದ 3 ಎಂದು ಗುರುತಿಸಲಾಗಿದೆ. ಸಾಕ್ಷಿಗೆ ಮುಮಾ-4 ರಿಂದ 16 ಗಳನ್ನು ತೋರಿಸಿದಾಗ ಸದರಿಯವುಗಳು ತನ್ನ ತಾಯಿಗೆ ಸೇರಿದ ಬಟ್ಟೆಗಳು, ಹಾಸಿಗೆ , ತಲೆದಿಂಬು, ದೀಪ, ಬೆಂಕಿಪೊಟ್ಟಣ , ಸ್ವೇಟರ್ , ಸ್ಕಾರ್ಫ್ , ಬ್ಲೌಸ್ , ಲಂಗ , ಸ್ವಲ್ಪ ಒಡೆದ ಬಳೆಯ ಚೂರುಗಳು ಎಂದು ಗುರುತಿಸುತ್ತಾರೆ. ನಾನು ಠಾಣೆಯಲ್ಲಿ ನೋಡಿದ ಆರೋಪಿಯು ಈಗ ನ್ಯಾಯಾಲಯದ ಮುಂದೆ ಇರುತ್ತಾನೆ.

ಆರೋಪಿ ಪರ ವಕೀಲರು ಅರ್ಜಿ ಸಲ್ಲಿಸಿ ಸಮಯಾವಕಾಶ ಕೇಳಿದ್ದು **,** ಸಮಯಾವಕಾಶ ನಿಡಲಾಯ್ತು**.**

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ**.**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ಎಫ್.ಟಿ.ಎಸ್.ಸಿ-1
ಹಾವೇರಿ.